# ಪ್ರೀತಿ ಏಕೆ ಭೂಮಿ ಮೇಲಿದೆ?



**ಪ್ರೀತಿಯಲ್ಲಿ ಏನೇನಾಗಬಹುದು? ಅವನು ಅವಳನ್ನೇ ಅಥವಾ ಅವನು ಅವಳನ್ನೇ ಏಕೆ ಪ್ರೀತಿಸುತ್ತಾನೆ?**

■ ನಡಹಳ್ಳಿ ವಸಂತ್

ಬಹುತೇಕ ಭಾರತೀಯ ಸಿನಿಮಾಗಳಲ್ಲಿ ಪ್ರೀತಿ ಪ್ರೇಮದ ಕಥೆಗಳಿರುತ್ತವೆ. ಇಂತಹ ಕಥೆಗಳಿಂದ ಪ್ರೇಕ್ಷಕರನ್ನು ಸೆಳೆದು ಹಣ ಮಾಡುವುದು ಸಿನಿಮಾಗಳ ಉದ್ದೇಶ. ನಿತ್ಯ ಜೀವನದ ಕಠೋರ ವಾಸ್ತವದಲ್ಲಿ ಸಿನಿಮಾದಲ್ಲಿ ತೋರಿಸುವಂತೆ ಗಂಡು–ಹೆಣ್ಣುಗಳ ನಡುವಿನ ಪ್ರಣಯ ಇರದಿದ್ದರೂ, ಅದು ಎಲ್ಲರನ್ನೂ ನಿರಂತರ ಸೆಳೆಯುತ್ತಿರುತ್ತದೆ ಎನ್ನುವುದಂತೂ ಸತ್ಯ. ನಮ್ಮ ಯುವಕರು ಇಂತಹ ಸಿನಿಮಾಗಳಿಗೆ ಮಾರುಹೋಗುವುದು ಸಹಜವಲ್ಲವೇ?

ನಾವೇಕೆ ಪ್ರೀತಿಸುತ್ತೇವೆ? ನಮಗೆಲ್ಲಾ ಲಕ್ಷಾಂತರ ಆಯ್ಕೆಗಳಿರುವಾಗ ಒಬ್ಬರಲ್ಲಿ ಮಾತ್ರ ಹೇಗೆ ಅನುರಕ್ತರಾಗುತ್ತೇವೆ? ಸೃಷ್ಟಿಯ ಈ ರಹಸ್ಯವನ್ನು ಭೇದಿಸಲು ಸಾಧ್ಯವೇ?

## ಪ್ರೀತಿ ಹೇಗೆ ಭೂಮಿಗೆ ಬಂತು?

ಪ್ರೀತಿ ಪ್ರಣಯಗಳು ಪ್ರಾಣಿಗಳಿಂದ ವಿಕಾಸ ಹೊಂದುತ್ತಾ ಮಾನವನಿಗೆ ಹೇಗೆ ತಲುಪಿರಬಹುದು? ಮಾನವಶಾಸ್ತ್ರಜ್ಞ ಹೆಲನ್‌ಫಿಷರ್ ಇದರ ಬಗೆಗೆ ತಮ್ಮ ಪುಸ್ತಕ 'why we love' ನಲ್ಲಿ ಹೀಗೆ ವಾದಿಸುತ್ತಾರೆ:

ಮಾನವನ ಮತ್ತು ಚಿಂಪಾಂಜಿಗಳ ಡಿಎನ್‌ಎಗಳಲ್ಲಿ ಸುಮಾರು ಶೇಕಡಾ 98ರಷ್ಟು ಹೋಲಿಕೆಯಿದೆ. ಅಂದರೆ ಸುಮಾರು 8ದಶಲಕ್ಷ ವರ್ಷಗಳ ಹಿಂದೆ ಮಾನವರು ಚಿಂಪಾಂಜಿಗಳ ರೀತಿಯಲ್ಲಿ ಎತ್ತರದ ಮರಗಳಲ್ಲಿ ಗುಂಪುಗುಂಪಾಗಿ ಬದುಕುತ್ತಿದ್ದಿರಬೇಕು. ಪ್ರಾಣಿಗಳಂತೆ ಮಾನವರೂ ನಾಲ್ಕು ಕಾಲುಗಳಿಂದ ನಡೆಯುತ್ತಿದ್ದರು. ಆಗ ಸಂತಾನಾಭಿವೃದ್ಧಿಗಾಗಿ ಗಂಡುಹೆಣ್ಣುಗಳ ಮಿಲನವಾಗುತ್ತಿದ್ದರೂ ಹೆಣ್ಣಿಗೆ ಮಕ್ಕಳನ್ನು ಬೆಳೆಸಲು ಗಂಡಿನ ಅಗತ್ಯ ಹೆಚ್ಚಾಗಿರಲಿಲ್ಲ. ಹಾಗಾಗಿ ಗಂಡುಹೆಣ್ಣುಗಳ ಪ್ರೀತಿ–ಪ್ರಣಯಗಳು ಮಾನವಕುಲವನ್ನು ಮುಂದುವರೆಸುವ ದೃಷ್ಟಿಯಿಂದ ದೈಹಿಕ ಆಕರ್ಷಣೆಗೆ ಸೀಮಿತವಾಗಿತ್ತು.

ಸುಮಾರು 3.5 ದಶಲಕ್ಷ ವರ್ಷಗಳ ಹಿಂದೆ ಮಾನವ ಮರಗಳಿಂದ ಕೆಳಗೆ ಬಂದು ಬಯಲು ಪ್ರದೇಶಗಳಲ್ಲಿ ಬದುಕುವುದಕ್ಕೆ ಪ್ರಾರಂಭಿಸಿದ. ಇದಕ್ಕೆ ತಕ್ಕಂತೆ ಮಾನವರ ಜೀವಜಶೈಲಿಯಲ್ಲಿ ಹಲವಾರು ಬದಲಾವಣೆಗಳಾಗುವುದರ